**SC No. 120/2019**
**P.W. 8**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 120/2019 P.W. 8**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **06.03.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MS** ವಕೀಲರಿಂದ :</u>

ನಾನು ಪಿರ್ಯಾದಿಯನ್ನು ಯಾರು ಎಲ್ಲಿ ದೂರನ್ನು ಟೈಪ್ ಮಾಡಿಕೊಟ್ಟರು ಎಂದು ಕೇಳಿಲ್ಲ. ಈ ಪ್ರಕರಣದಲ್ಲಿ ಗಾಯಾಳು ಇಬ್ಬರು ಇದ್ದು ಅವರು ಅದೇ ದಿನ ಚಿಕಿತ್ಸೆ ಪಡೆದುಕೊಂಡಿದ್ದರು. ದೂರಿನಲ್ಲಿ ಅವರಿಬ್ಬರು ಅದೇ ದಿನ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಮೂದಿಸಿದ್ದಾರೆ. ನಿಶಾನೆ.ಪಿ. 3 ರಿಂದ 6 ಫೋಟೋಗಳನ್ನು ಅವರು ಹಾಜರು ಪಡಿಸಿದ್ದರು. ಫೋಟೋಗಳನ್ನು ಯಾರು ಎಲ್ಲಿ ತೆಗೆದಿದ್ದು ಎಂದು ನಾನು ತನಿಖೆ ಮಾಡಲಿಲ್ಲ. ಫೋಟೋಗ್ರಾಫರ್ ರವರನ್ನು ಸಾಕ್ಷಿಯಾಗಿ ಮಾಡಿಲ್ಲ. ಕಲಂ. 65 ಬಿ ಸರ್ಟಿಫಿಕೇಟ್ ಅನ್ನು ಫೋಟೋ ತೆಗೆದವರು ಕೊಟ್ಟಿಲ್ಲ. ಸಾಕ್ಷಿದಾರರು ಆ ಫೋಟೋಗಳನ್ನು ಎಲ್ಲಿಂದ ಯಾರಿಂದ ಪಡೆದುಕೊಂಡರು ಎಂದು ಹೇಳಿಕೆಯಲ್ಲಿ ನಮೂದು ಮಾಡಿಲ್ಲ. ಕಬ್ಬಿಣದ ರಾಡ್ ಮತ್ತು ದೊಣ್ಣೆಯನ್ನು ವೈದ್ಯರಿಗೆ ಕಳುಹಿಸಿ ಅವರಿಂದ ಮಾಹಿತಿ ಪಡೆದುಕೊಂಡಿಲ್ಲ. ಆರೋಪಿತರು ಹಾಗೂ ಪಿರ್ಯಾದಿ ಮತ್ತು ಸಾಕ್ಷಿದಾರರು ನಡುವೆ ಸಿವಿಲ್ ವ್ಯಾಜ್ಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಬಗ್ಗೆ ಗಲಾಟೆಯಾಗಿದೆ ಎಂದು ನಾನು ದಾಖಲೆಯನ್ನು ಹಾಜರು ಪಡಿಸಿದ್ದೇನೆ. ನಾನು ಆ ಸಿವಿಲ್ ವ್ಯಾಜ್ಯದ ಬಗ್ಗೆ ಯಾವುದೇ ಮಾಹಿತಿಯನ್ನು ಕಲೆ ಹಾಕಿಲ್ಲ. ನಾನು ಆರೋಪಿತರನ್ನು ಆ ದಿನ ಆರೋಪಿತರನ್ನು ಬಂಧಿಸಿಲ್ಲ ಹಾಗೂ ಮಹಜರ್ ಗಳನ್ನು ಮಾಡಿಲ್ಲ ಹಾಗೂ ಮು.ಮಾ. ಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿ ಅಲ್ಲ. ಗಾಯಾದ ಪ್ರಮಾಣ ಪತ್ರವನ್ನು ದಿನಾಂಕ 26.10.2018 ರಂದು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ಸಂಪೂರ್ಣ ತನಿಖೆ ಮಾಡದೇ ಮತ್ತು ಸತ್ಯ ಅಸತ್ಯತೆ ವಿಚಾರಿಸದೇ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ. ಪ್ರಕರಣವನ್ನು ಪಿರ್ಯಾದಿ ಮತ್ತು ಸಾಕ್ಷಿಗಳ ಸುಳ್ಳು ಹೇಳಿಕೆ ದಾಖಲಿಸಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದೆರ ಸರಿ ಅಲ್ಲ. ಆ ರೀತಿ ಘಟನೆ ನಡೆದಿಲ್ಲ ಮತ್ತು ಸುಳ್ಳು ತನಿಖೆ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಿಶಾನೆ.ಪಿ. 3 ರಿಂದ 6 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ

ಎಂದೆರ ಸರಿ ಅಲ್ಲ. ನಮ್ಮ ಅಂಕಿ ಅಂಶಕ್ಕಾಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ. ಈ ರೀತಿ ಘಟನೆ ನಡೆದಿಲ್ಲ ಮತ್ತು ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.